# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1653
ಮಾನ್ಯ ಸದಸ್ಯರ ಹೆಸರು: : ಡಾ: ಜೈಮಾಲ ರಾಮಚಂದ್ರ
ಉತ್ತರಿಸಬೇಕಾದ ದಿನಾಂಕ : 20-03-2020
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ದಮನಿತ ಮಹಿಳೆಯರಿಗಾಗಿ ಕೌಶಲ್ಯ ತರಬೇತಿ ಮತ್ತು ಘಟಕ ಸ್ಥಾಪನೆಗಳ ಮೂಲಕ ಉದ್ಯೋಗ ನೀಡಲು 2019-20ನೇ ಸಾಲಿನಲ್ಲಿ ರೂ.11.50 ಕೋಟಿ ಅನುದಾನವನ್ನು ಬಿಡುಗಡೆ ಮಾಡಿರುವುದು ನಿಜವೇ; | ದಮನಿತ ಮಹಿಳೆಯರಿಗಾಗಿ ಕೌಶಲ್ಯತರಬೇತಿ ಮತ್ತು ಘಟಕ ಸ್ಥಾಪನೆಗಳ ಮೂಲಕ ಉದ್ಯೋಗ ನೀಡಲು 2019-20ನೇ ಸಾಲಿನಲ್ಲಿ ರೂ.11.50 ಕೋಟಿ ಅನುದಾನದ ಪೈಕಿ 1000 ದಮನಿತ ಮಹಿಳೆಯರಿಗೆ ತರಬೇತಿ ನೀಡಲು ಅಗತ್ಯವಿರುವ ಅನುದಾನ ರೂ.1.50 ಕೋಟಿಗಳನ್ನು ಮಹಿಳಾ ತರಬೇತಿ ಯೋಜನೆಯ ಲೆಕ್ಕಶೀರ್ಷಿಕೆ: 2235-02-103-0-16 ರಡಿಯಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ.3.50 ಕೋಟಿಗಳಲ್ಲಿ ವೆಚ್ಚ ಭರಿಸಲು ಅನುಮೋದನೆ ದೊರಕಿರುತ್ತದೆ. ರೂ.1.50 ಕೋಟಿಗಳು ಮಹಿಳಾ ತರಬೇತಿ ಯೋಜನೆಯಿಂದ ಬಿಡುಗಡೆಯಾಗಿರುತ್ತದೆ.<br><br>2019-20ನೇ ಸಾಲಿನಲ್ಲಿ ಬಂಡವಾಳ ಲೆಕ್ಕಶೀರ್ಷಿಕೆ: 4235-02-103-0-01ರಡಿ ದಮನಿತ ಮಹಿಳೆಯರ ಘಟಕ ಪ್ರಾರಂಭಿಸಲು ರೂ. 10.00 ಕೋಟಿಗಳನ್ನು ಒದಗಿಸಿದ್ದು, ಇದನ್ನು ರಾಜಸ್ವ ಲೆಕ್ಕ ಶೀರ್ಷಿಕೆಯಡಿ ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಿದ್ದು, ಅನುದಾನ ಬಿಡುಗಡೆಯಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಆ | ಈವರೆಗೂ ಎಷ್ಟು ಘಟಕಗಳು ಸ್ಥಾಪನೆಯಾಗಿವೆ; ಎಷ್ಟು ದಮನಿತ ಮಹಿಳೆಯರು ಇದರಿಂದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಅನುದಾನ ಬಿಡುಗಡೆಯ ನಂತರ ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ | 2020-21ನೇ ಸಾಲಿನಲ್ಲಿ ದಮನಿತ ಮಹಿಳೆಯರ ಘಟಕ ಸ್ಥಾಪನೆಗಾಗಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ; | 2020-21ನೇ ಸಾಲಿನಲ್ಲಿ ಚೇತನ ಯೋಜನೆಯಡಿ ಒದಗಿಸಲಾಗಿರುವ ರೂ.4.00 ಕೋಟಿಗಳ ಪೈಕಿ ರೂ.2.00 ಕೋಟಿಗಳನ್ನು ದಮನಿತ ಮಹಿಳೆಯರ ಘಟಕ ಸ್ಥಾಪನೆಗಾಗಿ ನಿಗದಿಪಡಿಸಲಾಗಿದೆ. |

| | | |
|---|---|---|
| ಈ | ಎಸ್.ಸಿ.ಪಿ/ಟಿ.ಎಸ್.ಪಿ ಯಿಂದ ದಮನಿತ ಮಹಿಳೆಯರಿಗೆ ಯಾವಯಾವ ಸೌಲಭ್ಯ/ ಪ್ರಯೋಜನ ನೀಡಲಾಗಿದೆ (ವಿವರ ನೀಡುವುದು) ಮತ್ತು ದಮನಿತ ಮಹಿಳೆಯರಿಗಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ. | ಸರ್ಕಾರದ ಆದೇಶ ಸಂಖ್ಯೆ:ಮಮಇ 19 ಮಅನಿ 2019, ದಿನಾಂಕ:08.11.2019ರನ್ವಯ 2019-20ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದಮನಿತ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ಚೇತನ ಯೋಜನೆಯಡಿ ನೇರವಾಗಿ ತಲಾ ರೂ.1,00,000/-(ರೂ.50,000/- ಗಳ ನೇರ ಸಾಲ ಹಾಗೂ ರೂ.50,000/- ಗಳ ಪ್ರೋತ್ಸಾಹಧನ)ಗಳನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತದೆ.<br>ಇದಲ್ಲದೆ ಪ್ರಥಮ ಬಾರಿಗೆ 2019-20ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಮಮಇ 23 ಮಅನಿ 2019, ಬೆಂಗಳೂರು, ದಿನಾಂಕ:05.12.2019ರಂತೆ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಬಳಕೆಯಾಗದ (Unspent) ಅನುದಾನದಲ್ಲಿ ಚೇತನಯೋಜನೆಗೆ ರೂ.10.00 ಕೋಟಿ ಗಳನ್ನು ನಿಗದಿಪಡಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: ಮಮಇ 23 ಮಅನಿ 2019, ಬೆಂಗಳೂರು, ದಿನಾಂಕ: 03.03.2020ರಂತೆ ಪರಿಶಿಷ್ಟ ಪಂಗಡದ ಉಪ ಯೋಜನೆಯಡಿ ಬಳಕೆಯಾಗದ (Unspent)ಅನುದಾನದಲ್ಲಿ ರೂ. 3.58 ಕೋಟಿಗಳನ್ನು ಚೇತನ ಯೋಜನೆಗೆ ನಿಗದಿಪಡಿಸಲಾಗಿದೆ. ಒಟ್ಟಾರೆ 13.58 ಕೋಟಿಗಳನ್ನು ನಿಗದಿಪಡಿಸಲಾಗಿದೆ.<br>2019-20ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಯಡಿ ಬಳಕೆಯಾಗದ (Unspent) ಅನುದಾನದಡಿ ಉದ್ಯೋಗಿನಿ ಹಾಗೂ ಸಮೃದ್ಧಿ ಯೋಜನೆಯಡಿ ಅನುಕ್ರಮವಾಗಿ ಪರಿಶಿಷ್ಟ ಜಾತಿಗೆ ಸೇರಿದ ಫಲಾನುಭವಿಗಳಿಗೆ ರೂ.15.54 ಕೋಟಿಗಳು ಮತ್ತು ರೂ.3.00ಕೋಟಿಗಳು ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.8.00 ಕೋಟಿಗಳು ಮತ್ತು ರೂ. 2.00 ಕೋಟಿಗಳು ನಿಗದಿಯಾಗಿದೆ. ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ದಮನಿತ ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತದೆ. |

**ಸಂಖ್ಯೆ:ಮಮಇ/17/ಮಅನಿ 2020**

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು